KACM200005292019

# ಹಿರಿಯ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ, ಕಡೂರು

ಉಪಸ್ಥಿತರುಃ- ಶ್ರೀಮತಿ. ಸುಜಾತ ಸುವರ್ಣ ಬಿ,
ಬಿ.ಕಾಂ., ಎಲ್.ಎಲ್.ಬಿ.,
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ,
ಕಡೂರು, ಚಿಕ್ಕಮಗಳೂರು ಜಿಲ್ಲೆ.

ಎಫ್.ಡಿ.ಪಿ. ಸಂಖ್ಯೆ: 7/2019

ದಿನಾಂಕಃ 3 ನೇ ಜನವರಿ - 2024

ಅರ್ಜಿದಾರರುಃ
ಶ್ರೀಮತಿ. ಶೋಭಲಕ್ಷ್ಮಿಕಾಂತ,
ಕೋಂ ಲಕ್ಷ್ಮಿಕಾಂತ,
ತಂದೆಃ ಅಂಜನಪ್ಪ,
ವಯಸ್ಸುಃ ಸುಮಾರು 47 ವರ್ಷ,
ವಾಸಃ ಡೋರ್ ನಂಬರ್ 104,
ಅಂಗೆಲೋ ಬ್ಲಾಕ್ - ಡಿ,
ಪ್ರಿನ್ಸ್ ರೆಸಿಡಿನ್ಸಿಯಾ,
ಟೋಲ್‌ಗೇಟ್ ಹತ್ತಿರ,
ಶ್ರೀಪೆರಂಬೂರು - 602 105,
ಚೆನ್ನೈ, ತಮಿಳುನಾಡು ರಾಜ್ಯ.

(ಅರ್ಜಿದಾರರ ಪರವಾಗಿಃ ಶ್ರೀಮತಿ. ಬಿ.ಆರ್. ರೇಷ್ಮಾ, ವಕೀಲರು)

- ವಿರುದ್ಧ -

ಎದುರುದಾರರು ಃ 1. ಶ್ರೀ ಅಂಜನಪ್ಪ,
ಬಿನ್ ಕಾಳಿಂಗಪ್ಪ,
ವಯಸ್ಸುಃ ಸುಮಾರು 81 ವರ್ಷ,
ವ್ಯವಸಾಯಗಾರರು,

2. ಶ್ರೀಮತಿ. ಸುಧಾ,
ಕೋಂ ಮಲ್ಲಿಕಾರ್ಜುನ,
ತಂದೆಃ ಅಂಜನಪ್ಪ,
ವಯಸ್ಸುಃ ಸುಮಾರು 51 ವರ್ಷ,

3. ಶ್ರೀ ಶ್ರೀಧರ,
ಬಿನ್ ಅಂಜನಪ್ಪ,
ವಯಸ್ಸುಃ ಸುಮಾರು 46 ವರ್ಷ,
ವ್ಯವಸಾಯಗಾರರು,

4. ಶ್ರೀ ಶ್ರೀನಿವಾಸ,
ಬಿನ್ ಅಂಜನಪ್ಪ,
ವಯಸ್ಸುಃ ಸುಮಾರು 46 ವರ್ಷ,
ವ್ಯವಸಾಯಗಾರರು,

1 ರಿಂದ 4 ನೇ ಪ್ರತಿವಾದಿಯರ ವಾಸಃ
ಜೆ.ಜೆ.ಸಿ ಕಾಲೇಜು ಎದುರು,
ಕಡೂರು ಟೌನ್,
ಕಡೂರು ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

(ಪ್ರತಿವಾದಿಯರ ಪರವಾಗಿಃ ಶ್ರೀ ಸಿ.ವಿ. ಸುಬ್ರಮಣ್ಯ, ವಕೀಲರು)

**ದಿನಾಂಕಃ 27.02.2020 ರಂದು ಈ ನ್ಯಾಯಾಲಯಕ್ಕೆ ಸಲ್ಲಿಸಲಾದಂತಹ ಮಧ್ಯಂತರ ಅರ್ಜಿಯಲ್ಲಿನ ಪಕ್ಷಗಾರರು**

(ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151)

ಅರ್ಜಿದಾರರು ಃ ಶ್ರೀಮತಿ. ಶೋಭಲಕ್ಷ್ಮಿಕಾಂತ,

- ವಿರುದ್ಧ -

ಎದುರುದಾರರು ಃ ಅಂಜನಪ್ಪ ಮತ್ತು ಇತರರು.

| | | |
|---|---|---|
| *i* | ಯಾವ ಕಾಯ್ದೆ / ಕಲಂ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ - | ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರ ಅಡಿಯಲ್ಲಿ |
| *ii* | ಯಾವ ಪರಿಹಾರಕ್ಕಾಗಿಃ- | ಅಂತಿಮ ಡಿಕ್ರಿಯ ಅರ್ಜಿಯಲ್ಲಿ ತಿದ್ದುಪಡಿ ಮಾಡಲು ಕೋರಿ. |
| *iii* | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ- | ದಿನಾಂಕಃ 27.02.2020. |
| *iv* | ಅರ್ಜಿಯ ಸಂಖ್ಯೆಃ | 03 |
| *v* | ಅರ್ಜಿಗೆ ವಿರುದ್ಧವಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕಃ- (ಪ್ರತ್ಯೇಕವಾಗಿ) | ದಿನಾಂಕಃ 06.02.2021. |
| *vi* | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ- | ದಿನಾಂಕಃ 03.01.2024 |

ದಿನಾಂಕಃ 17.08.2020 ರಂದು ಈ ನ್ಯಾಯಾಲಯಕ್ಕೆ ಸಲ್ಲಿಸಲಾದಂತಹ ಮಧ್ಯಂತರ ಅರ್ಜಿಯಲ್ಲಿನ ಪಕ್ಷಗಾರರು (ಮಧ್ಯಂತರ ಅರ್ಜಿ-3)

(ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151)

ಅರ್ಜಿದಾರರು ಃ ಶ್ರೀಮತಿ. ಶೋಭಲಕ್ಷ್ಮಿಕಾಂತ,

- ವಿರುದ್ಧ -

ಎದುರುದಾರರು ಃ ಅಂಜನಪ್ಪ ಮತ್ತು ಇತರರು.

| | | |
|---|---|---|
| *i* | ಯಾವ ಕಾಯ್ದೆ / ಕಲಂ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿದೆಃ - | ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರ ಅಡಿಯಲ್ಲಿ |
| *ii* | ಯಾವ ಪರಿಹಾರಕ್ಕಾಗಿಃ- | ಅಂತಿಮ ಡಿಕ್ರಿಯ ಅರ್ಜಿಯಲ್ಲಿ ತಿದ್ದುಪಡಿ ಮಾಡಲು ಕೋರಿ. |
| *iii* | ಯಾವ ದಿನಾಂಕದಂದು ಅರ್ಜಿಯನ್ನು ಸಲ್ಲಿಸಲಾಗಿದೆಃ- | ದಿನಾಂಕಃ 17.08.2020. |
| *iv* | ಅರ್ಜಿಯ ಸಂಖ್ಯೆಃ | 03 |
| *v* | ಅರ್ಜಿಗೆ ವಿರುದ್ಧವಾಗಿ ಆಕ್ಷೇಪಣೆಗಳನ್ನು ಸಲ್ಲಿಸಿದ ದಿನಾಂಕಃ- (ಪ್ರತ್ಯೇಕವಾಗಿ) | ದಿನಾಂಕಃ 06.02.2021. |
| *vi* | ಸದರಿ ಅರ್ಜಿಯ ಮೇಲೆ ಘೋಷಿಸಿದ ಆದೇಶದ ದಿನಾಂಕಃ- | ದಿನಾಂಕಃ 03.01.2024 |

ದಿನಾಂಕಃ 27.02.2020 ರಂದು ಹಾಗೂ ದಿನಾಂಕಃ 17.08.2020 ರಂದು (ಮಧ್ಯಂತರ ಅರ್ಜಿ-3) ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರಡಿ ಸಲ್ಲಿಸಿರುವಂತಹ ಮಧ್ಯಂತರ ಅರ್ಜಿಗಳ ಮೇಲಿನ ಆದೇಶ

ಅರ್ಜಿದಾರರು ದಿನಾಂಕಃ27.02.2020 ರಂದು ಮಧ್ಯಂತರ ಅರ್ಜಿಯನ್ನು ಕ್ರಮಾದೇಶ 6 ನಿಯಮ 17 ಸಹಕಲಂ 151ರ ರೀತ್ಯಾ ಅರ್ಜಿಯನ್ನು ಸಲ್ಲಿಸಿ, ಅರ್ಜಿಯನ್ನು ತಿದ್ದುಪಡಿ ಮಾಡಲು ಅವಕಾಶ ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಆದೇಶ ಪುಟದಲ್ಲಿ ಆ ಅರ್ಜಿ ಸಂಖ್ಯೆ-2 ಎಂದು ನಮೂದಾಗಿದ್ದು, ಅರ್ಜಿಯ ಮೇಲೆ ಅರ್ಜಿ ಸಂಖ್ಯೆ-3 ಎಂದು ನಮೂದಾಗಿರುತ್ತದೆ. ತದನಂತರ ಪುನಃ ಅರ್ಜಿದಾರರು ದಿನಾಂಕಃ 14.08.2020 ರಂದು ಮಧ್ಯಂತರ ಅರ್ಜಿಯನ್ನು ಕ್ರಮಾದೇಶ 6 ನಿಯಮ 17 ಸಹಕಲಂ 151ರ ರೀತ್ಯಾ ಅರ್ಜಿಯನ್ನು ಸಲ್ಲಿಸಿ, ಆ ಅರ್ಜಿಯಲ್ಲಿಯು ಕೂಡ ತಿದ್ದುಪಡಿ ಮಾಡಲು ಅವಕಾಶ ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಆ ಅರ್ಜಿಯನ್ನು ಆದೇಶ ಪುಟ ಮತ್ತು ಅರ್ಜಿಯಲ್ಲಿ ಮಧ್ಯಂತರ ಅರ್ಜಿ-3 ಎಂದು ನಮೂದಿಸಿದ್ದು, ಆದ್ದರಿಂದ ದಿನಾಂಕಃ 27.02.2020ರ ಮಧ್ಯಂತರ ಅರ್ಜಿಯನ್ನು ದಿನಾಂಕದ ಕ್ರಮದಿಂದಾಗಿ ಪರಿಗಣಿಸಲಾಗಿದೆ. ***ನಿಯೋಗಿಯ ವರದಿಗೆ ತಕರಾರನ್ನು ಸಲ್ಲಿಸಲು ನಿಗಧಿಪಡಿಸಿದ ಮುದ್ದತ್ತಿನಂದು, ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.***

2. ಅರ್ಜಿದಾರರು ದಿನಾಂಕಃ27.02.2020 ರಂದು ಮಧ್ಯಂತರ ಅರ್ಜಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ

151 ರ ರೀತ್ಯಾ ಅರ್ಜಿಯನ್ನು ಸಲ್ಲಿಸಿ, ಅರ್ಜಿಯನ್ನು ತಿದ್ದುಪಡಿ ಮಾಡಲು ಅವಕಾಶ ನೀಡಬೇಕೆಂದು ಕೋರಿಕೊಂಡಿರುತ್ತಾರೆ.

3. ದಿನಾಂಕ:27.02.2020 ರ ಮಧ್ಯಂತರ ಅರ್ಜಿಗೆ ಪೂರಕವಾಗಿ ಅರ್ಜಿದಾರರು ಪ್ರಮಾಣ ಪತ್ರವನ್ನು ಸಲ್ಲಿಸಿ, ತಮ್ಮ ಪ್ರಮಾಣ ಪತ್ರದಲ್ಲಿ, ಅವರು ಅಸಲು ದಾವಾ ಸಂಖ್ಯೆ: 31/2015 ನ್ನು ದಾವಾ ಆಸ್ತಿಯ ವಿಭಜನೆ ಮತ್ತು ಸ್ವಾಧೀನ ಕೋರಿ ಸಲ್ಲಿಸಿದ್ದು, ನ್ಯಾಯಾಲಯವು ಅವರಿಗೆ 1/5 ನೇ ಅಂಶ ಹಿಸ್ಸೆಯನ್ನು ನಿಗಧಿಪಡಿಸಿ, ಪ್ರಾಥಮಿಕ ಡಿಕ್ರಿಯನ್ನು ರಚಿಸಿದ್ದು, ತಾಲ್ಲೂಕು ಸರ್ವೆಯರ್ ರವರು ಸರ್ವೆ ಮಾಡಿದ್ದು, ಸರ್ವೆ ಮಾಡುವ ಸಮಯದಲ್ಲಿ ಐಟಂ ನಂಬರ್-15 ನ್ನು ತಪ್ಪಾಗಿ ಸರ್ವೆ 39 ಎಂದು ನಮೂದಾಗಿರುತ್ತದೆ ಎಂದು ಗಮನಕ್ಕೆ ಬಂದಿರುತ್ತದೆ, ಆದರೆ ಆ ಆಸ್ತಿಯ ಸರ್ವೆ ನಂಬರ್ 118/2 ಆಗಿರುತ್ತದೆ, ಆದ್ದರಿಂದ ಅದನ್ನು ತಿದ್ದುಪಡಿ ಮಾಡುವುದು ಅವಶ್ಯಕವಾಗಿರುತ್ತದೆ.

ದಾವಾ ಐಟಂ ನಂಬರ್-14 - ಸರ್ವೆ ನಂಬರ್ 11/3 ಹಿಂದಿನ ಪಹಣಿ ಪತ್ರಿಕೆಯಲ್ಲಿ 0-32.08 ಜಮೀನು ಅಂಜನಪ್ಪ ಬಿನ್ ಕಾಳಿಂಗಪ್ಪ ಇವರ ಹೆಸರಿನಲ್ಲಿದ್ದು, ಸರ್ವೆ ಮಾಡುವ ಕಾಲಕ್ಕೆ ಅವರಿಗೆ ಹೆಚ್.ಕೆ ಅಂಜನಪ್ಪ ಇವರ ಹೆಸರಿನಲ್ಲಿ ಎಂ.ಆರ್. ನಂಬರ್ 14/2015-16 ರಂತೆ ಪುನಃ 32 ವರೆ ಗುಂಟೆ ಆಸ್ತಿ ಇದೆ ಎಂದು ಕಂಡು ಬಂದಿದ್ದು ಮತ್ತು ಆ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತದೆ.

ವ್ಯವಸಾಯ ಭೂಮಿ ಸರ್ವೆ ನಂಬರ್ 61/1 ಮತ್ತು 35/3 ರ ಆಸ್ತಿಯು ಅವರಿಗೆ ಬೇರೆ ಆಸ್ತಿಯನ್ನು ಸರ್ವೆ ಮಾಡುವಾಗ ಒಟ್ಟು

ಕುಟುಂಬದ ಆಸ್ತಿಗಳು ಎಂದು ತಿಳಿದು ಬಂದಿರುತ್ತದೆ ಮತ್ತು ಅಸೆಸ್‌ಮೆಂಟ್ ನಂಬರ್ 122, ವಿಸ್ತೀರ್ಣ 70 X 70 ಅಡಿಗಳು, ಹರುವನಹಳ್ಳಿ ಗ್ರಾಮ, ತಂಗಳಿ ಗ್ರಾಮ ಪಂಚಾಯಿತಿ, ಕಡೂರಿನ ಖಾತಾ ರಿಜಿಸ್ಟರ್ ಪ್ರತಿಯನ್ನು ಪಡೆದುಕೊಂಡಾಗ, ಅವರಿಗೆ ಅವರ ತಂದೆ ಅಂಜನಪ್ಪ 3 ಮತ್ತು 4 ನೇ ಎದುರುದಾರರಿಗೆ 35 X 70 ಅಡಿಗಳ ವಿಸ್ತೀರ್ಣದ ಆಸ್ತಿಯನ್ನು ವಿಭಾಗ ಮಾಡಿಕೊಟ್ಟಿರುವುದು ಕಂಡು ಬರುತ್ತದೆ. ಅವರ ತಂದೆಗೆ ಆ ಆಸ್ತಿಯನ್ನು ವಿಭಾಗ ಮಾಡಿಕೊಡುವಂತಹ ಯಾವುದೇ ಹಕ್ಕು ಇದ್ದಿರುವುದಿಲ್ಲ. ಆ ಆಸ್ತಿಯು ಅಸಲು ದಾವಾ ಸಂಖ್ಯೆ: 31/2015 ರಲ್ಲಿ ಸೇರ್ಪಡೆಗೊಂಡಿರುವುದಿಲ್ಲ. ಆದ್ದರಿಂದ, ಆ ಆಸ್ತಿಗಳನ್ನು ಐಟಂ ನಂಬರ್ 21 ಮತ್ತು 22 ಎಂದು ಸೇರಿಸುವುದು ಅವಶ್ಯಕವಾಗಿರುತ್ತದೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ ಅರ್ಜಿದಾರರಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ

4. ಅರ್ಜಿದಾರರು ದಿನಾಂಕ:17.08.2020 ರಂದು ಮಧ್ಯಂತರ ಅರ್ಜಿ-3 ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರ ರೀತ್ಯಾ ಅರ್ಜಿಯನ್ನು ಸಲ್ಲಿಸಿ, ಅರ್ಜಿಯನ್ನು ತಿದ್ದುಪಡಿ ಮಾಡಲು ಅವಕಾಶ ನೀಡಬೇಕೆಂದು ಕೋರಿಕೊಂಡಿರುತ್ತಾರೆ.

5. ದಿನಾಂಕ:17.08.2020 ರ ಮಧ್ಯಂತರ ಅರ್ಜಿಗೆ ಪೂರಕವಾಗಿ ಅರ್ಜಿದಾರರು ಪ್ರಮಾಣ ಪತ್ರವನ್ನು ಸಲ್ಲಿಸಿ, ತಮ್ಮ ಪ್ರಮಾಣ ಪತ್ರದಲ್ಲಿ, ಅವರು ಅಸಲು ದಾವಾ ಸಂಖ್ಯೆ: 31/2015 ಅನ್ನು ದಾವಾ ಆಸ್ತಿಯ ವಿಭಜನೆ

ಮತ್ತು ಸ್ವಾಧೀನ ಕೋರಿ ಸಲ್ಲಿಸಿದ್ದು, ನ್ಯಾಯಾಲಯವು ಅವರಿಗೆ 1/5 ನೇ ಅಂಶ ಹಿಸ್ಸೆಯನ್ನು ನಿಗಧಿಪಡಿಸಿ, ಪ್ರಾಥಮಿಕ ಡಿಕ್ರಿಯನ್ನು ರಚಿಸಿದ್ದು, ತಾಲ್ಲೂಕು ಸರ್ವೆಯರ್ ರವರು ಸರ್ವೆ ಮಾಡಿದ್ದು, ಸರ್ವೆ ಮಾಡುವ ಸಮಯದಲ್ಲಿ ಐಟಂ ನಂಬರ್-9 ಸರ್ವೆ ನಂಬರ್ 35/1 ಎಂದು ನಮೂದಿದ್ದು, ಖಾತೆಯು ಅವರ ತಂದೆಯ ಹೆಸರಿನಲ್ಲಿದ್ದು, ಆದರೆ ಅವರ ತಂದೆ ಅಂಜನಪ್ಪ ಇವರು ಸರ್ವೆ ನಂಬರ್ 35/3 ಮಲ್ಲಪ್ಪನಹಳ್ಳಿ ಗ್ರಾಮದಲ್ಲಿ 4 ಎಕರೆ 32 ಗುಂಟೆ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆಂದು, ಆದ್ದರಿಂದ ಅವರು ತಿದ್ದುಪಡಿ ಮಾಡಲು ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ಮತ್ತು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಐಟಂ ನಂಬರ್-11 ರ ಸರ್ವೆ ನಂಬರ್ 45/1 ಪಿ2 ಆಗಿದ್ದು, ಆದರೆ ಸರ್ವೆ ಮಾಡುವಾಗ ಅದರ ಸರ್ವೆ ನಂಬರ್ 45 ಆಗಿರುತ್ತದೆ.

ದಾವಾ ಐಟಂ ನಂಬರ್-14 - ಸರ್ವೆ ನಂಬರ್ 11/3 ಹಿಂದಿನ ಪಹಣಿ ಪತ್ರಿಕೆಯಲ್ಲಿ 0-32.08 ಜಮೀನು ಅಂಜನಪ್ಪ ಬಿನ್ ಕಾಳಿಂಗಪ್ಪ ಇವರ ಹೆಸರಿನಲ್ಲಿದ್ದು, ಸರ್ವೆ ಮಾಡುವ ಕಾಲಕ್ಕೆ ಅವರಿಗೆ ಹೆಚ್.ಕೆ ಅಂಜನಪ್ಪ ಇವರ ಹೆಸರಿನಲ್ಲಿ ಎಂ.ಆರ್. ನಂಬರ್ 14/2015-16 ರಂತೆ ಪುನಃ 32 ವರೆ ಗುಂಟೆ ಆಸ್ತಿ ಇದೆ ಎಂದು ಕಂಡು ಬಂದಿದ್ದು ಮತ್ತು ಆ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತದೆ.

ಸರ್ವೆಯರ್ ರವರು ಸರ್ವೆ ಮಾಡುವ ಸಮಯದಲ್ಲಿ ದಾವಾ ಐಟಂ ನಂಬರ್-15 - ಸರ್ವೆ ನಂಬರ್ 118/2 ಆಗಿದ್ದು, ಆದರೆ ಬೆರಳಚ್ಚು ತಪ್ಪಿನಿಂದ ಆ ಆಸ್ತಿಯು ಸರ್ವೆ ನಂಬರ್ 39 ಎಂದು ನಮೂದಾಗಿರುತ್ತದೆ

ಎಂದು, ಆದ್ದರಿಂದ ತಿದ್ದುಪಡಿ ಮಾಡುವುದು ಅವಶ್ಯಕತೆ ಇದೆ. ಒಂದು ವೇಳೆ ಅರ್ಜಿಯನ್ನು ಪುರಸ್ಕರಿಸದೇ ಇದ್ದಲ್ಲಿ ಅರ್ಜಿದಾರರಿಗೆ ತುಂಬಲಾರದ ನಷ್ಟವುಂಟಾಗುತ್ತದೆ. ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿಕೊಂಡಿರುತ್ತಾರೆ

6. 4 ನೇ ಎದುರುದಾರರ ಪರ ವಕೀಲರು ಅರ್ಜಿದಾರರು ಸಲ್ಲಿಸಿದಂತಹ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರ ಮಧ್ಯಂತರ ಅರ್ಜಿಗಳಿಗೆಗೆ ತಮ್ಮ ತಕರಾರನ್ನು ಸಲ್ಲಿಸಿದ್ದು, ತಕರಾರಿನ ಸಾರಾಂಶ ಈ ಕೆಳಗಿನಂತಿರುತ್ತದೆಃ-

ಅರ್ಜಿದಾರರು ಸಲ್ಲಿಸಿರುವ ಅರ್ಜಿಯು ಕಾನೂನಿಗೆ ವಿರುದ್ಧವಾಗಿದ್ದು ಮತ್ತು ಪ್ರಾಥಮಿಕ ಡಿಕ್ರಿಗೆ ಹಾಗೂ ನ್ಯಾಯಾಲಯದ ತೀರ್ಪು ಮತ್ತು ಆದೇಶಕ್ಕೆ ವಿರುದ್ಧವಾಗಿರುತ್ತದೆ, ಆದ್ದರಿಂದ ಸದರಿ ಅರ್ಜಿಯು ಊರ್ಜಿತವಾಗತಕ್ಕದ್ದಲ್ಲ. ಪ್ರಾಥಮಿಕ ಡಿಕ್ರಿಯ ಮೇಲೆ ಎದುರುದಾರರು ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಲಯದಲ್ಲಿ ಮೇಲ್ಮನವಿ ಸಂಖ್ಯೆಃ 51/2019 ರಂತೆ ಸಲ್ಲಿಸಿದ್ದು, ಸದರಿ ಮೇಲ್ಮನವಿಯು ಹಾಲಿ ಚಾಲ್ತಿಯಲ್ಲಿರುತ್ತದೆ ಮತ್ತು ಎಫ್.ಡಿ.ಪಿ. ಸಂಖ್ಯೆಃ 7/2019 ರಲ್ಲಿ ಅಂತಿಮ ಡಿಕ್ರಿ ಮಾಡಬಾರದೆಂದು ತಡೆಯಾಜ್ಞೆಯ ಆದೇಶವಿರುತ್ತದೆ. ಎಫ್.ಡಿ.ಪಿ. ಅರ್ಜಿಯಲ್ಲಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿ ಮಧ್ಯಂತರ ಅರ್ಜಿ ಸಲ್ಲಿಸಿ, ವಾದಪತ್ರ, ತೀರ್ಪು ಮತ್ತು ಆದೇಶದಲ್ಲಿ ಇಲ್ಲದ ಆಸ್ತಿಯನ್ನು ಸೇರಿಸಲು ಬರುವುದಿಲ್ಲ. ವಾದಪತ್ರದಲ್ಲಿ ಇಲ್ಲದ ಆಸ್ತಿಯನ್ನು

ಎಫ್.ಡಿ.ಪಿ. ಅರ್ಜಿಯಲ್ಲಿ ತಿದ್ದುಪಡಿ ಮಾಡಿ ಸೇರಿಸಲು ಬರುವುದಿಲ್ಲ ಹಾಗೂ ಅದು ಕಾನೂನಿಗೆ ವಿರುದ್ಧವಾಗಿರುತ್ತದೆ.

ಉದ್ದೇಶಿತ ತಿದ್ದುಪಡಿಯಲ್ಲಿ ಕೋರಿರುವುದು ಮೂಲ ಡಿಕ್ರಿಗೆ ವಿರುದ್ಧವಾಗಿರುತ್ತದೆ. ಮೂಲ ಡಿಕ್ರಿಯಲ್ಲಿ ಪಹಣಿ ಹಾಜರುಪಡಿಸಿದ್ದು, ಸದರಿ ದಾಖಲೆಯಲ್ಲಿ ಇರುವ ಸರ್ವೆ ನಂಬರ್ ಗಳಿಗೆ ಡಿಕ್ರಿ ಆಗಿರುತ್ತದೆ. ಈಗ ಹೇಗೆ ಬದಲಾವಣೆ ಆಗುತ್ತದೆ ಮತ್ತು ಎಂದಿನಿಂದ ಬದಲಾವಣೆ ಆಗಿರುತ್ತದೆ ಮತ್ತು ಯಾವ ದಾಖಲೆಯಲ್ಲಿ ಬದಲಾವಣೆ ಆಗಿರುತ್ತದೆ ಎಂಬುದನ್ನು ಅರ್ಜಿದಾರರು ರುಜುವಾತುಪಡಿಸಬೇಕಾಗಿರುತ್ತದೆ. ಆದರೆ ಅರ್ಜಿದಾರರು ಪ್ರಮಾಣಪತ್ರದಲ್ಲಿ ಯಾವುದೇ ಅಂಶವನ್ನು ಪ್ರಮಾಣೀಕರಿಸಿರುವುದಿಲ್ಲ. ಆದ್ದರಿಂದ, ಅರ್ಜಿದಾರರು ಸಲ್ಲಿಸಿರುವ ಅರ್ಜಿಯನ್ನು ಖರ್ಚು ಸಹಿತ ವಜಾಗೊಳಿಸಬೇಕೆಂದು ಕೋರಿಕೊಂಡಿರುತ್ತಾರೆ.

7. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು.

8. ಈ ಕೆಳಕಂಡ ಅಂಶಗಳು ನ್ಯಾಯಾಲಯದ ಪರಿಗಣನೆಗೆ ಉದ್ಭವಿಸಿರುವ ಅಂಶಗಳುಃ-

1. ಅರ್ಜಿದಾರರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರಡಿಯಲ್ಲಿ ಸಲ್ಲಿಸಿದಂತಹ ಎರಡೂ ಅರ್ಜಿಗಳಲ್ಲಿ ತಿದ್ದುಪಡಿ ಮಾಡಲು ಕೋರಿರುವಂತಹ ಸಂಗತಿಯನ್ನು ಈ ಅಂತಿಮ ಡಿಕ್ರಿಯಲ್ಲಿ ಸೇರ್ಪಡೆಗೊಳಿಸುವುದು

ಅವಶ್ಯಕತೆ ಇದೆ ಎಂದು ಸಕಾರಣವನ್ನು ನೀಡಿರುತ್ತಾರೆಯೇ?

2. ಅರ್ಜಿದಾರರ ದಿನಾಂಕಃ27.02.2020 ಮತ್ತು ದಿನಾಂಕಃ17.08.2020 ರಂದು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರಡಿಯಲ್ಲಿ ಸಲ್ಲಿಸಿದಂತಹ ಎರಡೂ ಅರ್ಜಿಗಳನ್ನು ಪುರಸ್ಕರಿಸಲು ಯೋಗ್ಯವಾಗಿರುತ್ತದೆಯೇ?

3. ಯಾವ ಆದೇಶ?

9. ಅರ್ಜಿದಾರರ ಮತ್ತು ಎದುರುದಾರರ ಪರ ವಕೀಲರ ವಾದವನ್ನು ಕೇಳಿ, ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ, ನ್ಯಾಯಾಲಯವು ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದೆ.

ಅಂಶ-1 ಃ ನಕಾರಾತ್ಮಕವಾಗಿ,

ಅಂಶ-2 ಃ ನಕಾರಾತ್ಮಕವಾಗಿ,

ಅಂಶ-3 ಃ ಅಂತಿಮ ಆದೇಶದಂತೆ,
ಈ ಕೆಳಕಂಡ ಕಾರಣಗಳಿಗಾಗಿ,

## ಕಾ ರ ಣ ಗಳು

10. ಅಂಶ-1ಃ ಅರ್ಜಿದಾರರು ದಿನಾಂಕಃ27.02.2020 ಮತ್ತು ದಿನಾಂಕಃ17.08.2020 ರಂದು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರಡಿಯಲ್ಲಿ ಎರಡೂ ಪ್ರತ್ಯೇಕವಾದ ಮಧ್ಯಂತರ

ಅರ್ಜಿಗಳನ್ನು ಸಲ್ಲಿಸಿ, ಅಂತಿಮ ಡಿಕ್ರಿಯ ಅರ್ಜಿಯನ್ನು ತಿದ್ದುಪಡಿ ಮಾಡಲು ಅವಕಾಶ ನೀಡಬೇಕೆಂದು ಕೋರಿಕೊಂಡಿರುತ್ತಾರೆ.

11. ಅರ್ಜಿದಾರರು ದಿನಾಂಕಃ 27.02.2020 ರಂದು ಸಲ್ಲಿಸಿದಂತಹ ತಮ್ಮ ಅರ್ಜಿಯಲ್ಲಿ, ಸರ್ವೆ ನಂಬರ್ 11/3 ರಲ್ಲಿ ಕೇವಲ 32 ವರೆ ಗುಂಟೆಯನ್ನು ಸೇರಿಸಿದ್ದು, ಪುನಃ 32.08 ಗುಂಟೆಯನ್ನು ಸೇರಿಸಬೇಕೆಂದು ಮತ್ತು ಸರ್ವೆ ನಂಬರ್ 39 ತಪ್ಪಾಗಿ ನಮೂದಿದ್ದು, ಅದರೆ ಸರ್ವೆ ನಂಬರ್ 118/2 ಆಗಬೇಕೆಂದು ಹಾಗೂ ದಾವಾ ಅನುಸೂಚಿ-21 ಮತ್ತು 22 ಎಂಬ ಎರಡೂ ಆಸ್ತಿಗಳನ್ನು ಈ ಅಂತಿಮ ಡಿಕ್ರಿ ಅರ್ಜಿಯಲ್ಲಿ ಸೇರಿಸಬೇಕೆಂದು ಕೋರಿಕೊಂಡಿರುತ್ತಾರೆ.

12. ಅರ್ಜಿದಾರರು ದಿನಾಂಕಃ 17.08.2020 ರಂದು ಸಲ್ಲಿಸಿದಂತಹ ತಮ್ಮ ಅರ್ಜಿಯಲ್ಲಿ, ತಾಲ್ಲೂಕು ಸರ್ವೆಯರ್ ರವರು ಸರ್ವೆ ಮಾಡಿದ್ದು, ಸರ್ವೆ ಮಾಡುವ ಸಮಯದಲ್ಲಿ ಐಟಂ ನಂಬರ್-9 ಸರ್ವೆ ನಂಬರ್ 35/1 ಎಂದು ನಮೂದಿದ್ದು, ಖಾತೆಯು ಅವರ ತಂದೆಯ ಹೆಸರಿನಲ್ಲಿದ್ದು, ಆದರೆ ಅವರ ತಂದೆ ಅಂಜನಪ್ಪ ಇವರು ಸರ್ವೆ ನಂಬರ್ 35/3 ಮಲ್ಲಪ್ಪನಹಳ್ಳಿ ಗ್ರಾಮದಲ್ಲಿ 4 ಎಕರೆ 32 ಗುಂಟೆ ಆಸ್ತಿಯಲ್ಲಿ ಸ್ವಾಧೀನದಲ್ಲಿ ಇರುತ್ತಾರೆಂದು, ಮತ್ತು ದಾವೆಯನ್ನು ಸಲ್ಲಿಸುವ ಸಮಯದಲ್ಲಿ ದಾವಾ ಐಟಂ ನಂಬರ್-11 ರ ಸರ್ವೆ ನಂಬರ್ 45/1 ಪಿ2 ಆಗಿದ್ದು, ಆದರೆ ಸರ್ವೆ ಮಾಡುವಾಗ ಸರ್ವೆಯರ್ ಆ ನಂಬರ್ ಪೋಡಿಯಾಗಿ ಸರ್ವೆ ನಂಬರ್ 45 ಎಂದು ನಮೂದು ಆಗಿರುತ್ತದೆಂದು, ದಾವಾ ಐಟಂ ನಂಬರ್-14 - ಸರ್ವೆ ನಂಬರ್ 11/3 ಹಿಂದಿನ ಪಹಣಿ ಪತ್ರಿಕೆಯಲ್ಲಿ 0-32.08 ಜಮೀನು ಅಂಜನಪ್ಪ ಬಿನ್

ಕಾಳಿಂಗಪ್ಪ ಇವರ ಹೆಸರಿನಲ್ಲಿದ್ದು, ಸರ್ವೆ ಮಾಡುವ ಕಾಲಕ್ಕೆ ಅವರಿಗೆ ಹೆಚ್.ಕೆ ಅಂಜನಪ್ಪ ಇವರ ಹೆಸರಿನಲ್ಲಿ ಎಂ.ಆರ್. ನಂಬರ್ 14/2015-16 ರಂತೆ ಪುನಃ 32 ವರೆ ಗುಂಟೆ ಆಸ್ತಿ ಇದೆ ಎಂದು ಕಂಡು ಬಂದಿದ್ದು ಮತ್ತು ಆ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳಾಗಿರುತ್ತದೆ, ಸರ್ವೆಯರ್ ರವರು ಸರ್ವೆ ಮಾಡುವ ಸಮಯದಲ್ಲಿ ದಾವಾ ಐಟಂ ನಂಬರ್-15 - ಸರ್ವೆ ನಂಬರ್ 118/2 ಆಗಿದ್ದು, ಆದರೆ ಬೆರಳಚ್ಚು ತಪ್ಪಿನಿಂದ ಆ ಆಸ್ತಿಯು ಸರ್ವೆ ನಂಬರ್ 39 ಎಂದು ನಮೂದಾಗಿರುತ್ತದೆ, ಆದ್ದರಿಂದ ತಿದ್ದುಪಡಿ ಮಾಡುವುದು ಅವಶ್ಯಕತೆ ಇದೆ ಎಂಬುದಾಗಿರುತ್ತದೆ.

13. ಪ್ರತಿವಾದಿಯರ ಪ್ರಕಾರ, ಎಫ್.ಡಿ.ಪಿ. ಅರ್ಜಿಯಲ್ಲಿ ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ರಡಿ ಮಧ್ಯಂತರ ಅರ್ಜಿ ಸಲ್ಲಿಸಿ, ವಾದಪತ್ರ, ತೀರ್ಪು ಮತ್ತು ಆದೇಶದಲ್ಲಿ ಇಲ್ಲದ ಆಸ್ತಿಯನ್ನು ಸೇರಿಸಲು ಬರುವುದಿಲ್ಲ ಹಾಗೂ ಅದು ಕಾನೂನಿಗೆ ವಿರುದ್ಧವಾಗಿರುತ್ತದೆ ಹಾಗೂ ಉದ್ದೇಶಿತ ತಿದ್ದುಪಡಿಯಲ್ಲಿ ಕೋರಿರುವುದು ಮೂಲ ಡಿಕ್ರಿಗೆ ವಿರುದ್ಧವಾಗಿರುತ್ತದೆ ಎಂಬುದಾಗಿರುತ್ತದೆ.

14. ಅರ್ಜಿದಾರರು ಸೇರ್ಪಡೆಗೊಳಿಸಬೇಕೆಂದು ಕೋರಿರುವಂತಹ ಸ್ವತ್ತುಗಳು ಅವರ ಒಟ್ಟು ಕುಟುಂಬದ ಸ್ವತ್ತುಗಳು ಹೌದೋ ಅಥವಾ ಅಲ್ಲವೋ ಅಥವಾ ಆ ಸ್ವತ್ತುಗಳು ಯಾವ ನಾತೆಯಿಂದ ಅವರ ಕುಟುಂಬಕ್ಕೆ ಬಂದಿರುತ್ತದೆ ಎಂಬುದನ್ನು ಪುರಾವೆಗೊಳಿಸಲು ಸಾಕ್ಷ್ಯಾಧಾರಗಳ ಅವಶ್ಯಕತೆ ಇರುತ್ತದೆ ಹಾಗೂ ಪ್ರತಿವಾದಿಯರಿಗೆ ಆ ಆಸ್ತಿಗಳ ಕುರಿತು ಪ್ರತಿಪಾದಿಸುವ ಅಧಿಕಾರ ಕೂಡ ಇರುತ್ತದೆ.

15. ಅರ್ಜಿದಾರರು ಎಲ್ಲಿಯೂ ಕೂಡ ಆ ಆಸ್ತಿಗಳು ತಮ್ಮ ಒಟ್ಟು ಕುಟುಂಬದ ಆಸ್ತಿಗಳು ಎಂದು ವಾದಪತ್ರದಲ್ಲಿ ನಮೂದಿಸಿರುವುದು ಕಂಡು ಬಂದಿರುವುದಿಲ್ಲ. ಅರ್ಜಿದಾರರು ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ತೀರ್ಪುಜನ್ಯ - ಸಿವಿಲ್ ಅಪೀಲ್ ನಂಬರ್ 7008/2008 ನ್ನು ಹಾಜರುಪಡಿಸಿ, ಅಂತಿಮ ಡಿಕ್ರಿಯಲ್ಲಿ ಕೂಡ ತಿದ್ದುಪಡಿ ಮಾಡಲು ಅವಕಾಶವಿದೆ ಎಂದು ವಾದವನ್ನು ಮಂಡಿಸಿದ್ದು, ಆ ಪ್ರಕರಣದಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ವಿಚಾರಣಾ ನ್ಯಾಯಾಲಯವು ವಿವಾದಾಂಶ ಸರಿಯಾಗಿ ರಚಿಸಿರುವುದಿಲ್ಲವೆಂದು ಮತ್ತು ಹೆಚ್ಚುವರಿ ಪ್ರತಿವಾದ ಪತ್ರವನ್ನು ಸಲ್ಲಿಸಲು ಅವಕಾಶ ನೀಡಬೇಕಾಗಿತ್ತು ಮತ್ತು ಬಾಂಬೆ ಸೈಕಲ್ ಕಂಪೆನಿಯು ವಿಭಜನೆಯ ವಿಷಯವಾಗಿರಬಹುದೇ ಅಥವಾ ಇಲ್ಲವೇ ಎನ್ನುವ ಅರ್ಹತೆಯನ್ನು ನಿರ್ಧರಿಸಿರುವ ಅಗತ್ಯವಿದೆ ಎಂದು ಉಲ್ಲೇಖಿಸಿರುತ್ತಾರೆ.

16. ವಾದಿಯಾಗಲೀ ಅಥವಾ ಪ್ರತಿವಾದಿಯರಾಗಲೀ ಅರ್ಜಿಯಲ್ಲಿ ಸೇರ್ಪಡೆಗೊಳಿಸಲು ಕೋರಿರುವಂತಹ ಆಸ್ತಿಗಳು ದಾವೆಯ ವಸ್ತುಸ್ಥಿತಿ ಆಗಿರುತ್ತದೆಂದು ಖಂಡನೆಯನ್ನು ತೆಗೆದುಕೊಂಡಿರುವುದಿಲ್ಲ. ಆದ್ದರಿಂದ ಗೌರವಾನ್ವಿತರ ಮೇಲೆ ವಿವರಿಸಿದಂತಹ ತೀರ್ಪುಜನ್ಯದ ಅಂಶವು ಈ ಅರ್ಜಿಯ ವಸ್ತುಸ್ಥಿತಿಯ ಅಂಶಕ್ಕೆ ವ್ಯತಿರಿಕ್ತವಾಗಿರುತ್ತದೆ.

17. ಗೌರವಾನ್ವಿತ ಉಚ್ಚ ನ್ಯಾಯಾಲಯ, ಬೆಂಗಳೂರು ಇವರ ತೀರ್ಪುಜನ್ಯ 2014 (3) ಕೆ.ಸಿ.ಸಿ.ಆರ್. 2214 (ಚನ್ನವೀರಪ್ಪಗೌಡ ವಿರುದ್ಧ ರೇಣುಕಪ್ಪಗೌಡ ಮತ್ತು ಇತರರ) ಪ್ರಕರಣದಲ್ಲಿ ಈ ಕೆಳಗಿನಂತೆ ಉಲ್ಲೇಖ ಇರುತ್ತದೆ.

*12. However, this principle cannot be extended to include a property which was not the subject matter of the suit, at the time of passing of the preliminary decree. Variation of shares already declared in the property which is the subject matter of the suit is totally different from varying the subject matter of the suit. The reason being that what is the share to which a party to a suit is entitled to in law is purely a question of law, whereas a share in a property is dependent on the nature of the property which is purely a question of fact, which is to be decided on the facts and circumstances of the case based on the evidence adduced, Therefore, once a preliminary decree is passed in respect of the subject matter of the suit, question of including or adding a property to the subject matter of the suit subsequently and claiming a share in respect of the property so included or added is not permissible in law. In respect of the said property a separate suit is maintainable, if sufficient cause is shown for its exclusion in the earlier suit for partition. However, on the ground final decree is not yet passed, the said property cannot be included in the suit after passing of*

*the preliminary decree or a second preliminary decree cannot be passed nor can it be the subject matter of final decree proceedings. Further, if a property which was not the subject matter of a suit, were to be included at the stage of Final Decree Proceedings, evidence has to be recorded to decide whether it is a Joint Family Property or not and if the parties to the suit have share therein or not. By chance if a property belonging to the Joint family could not be included in the suit, a second suit for partition of the property so left out is not maintainable. But if there are acceptable reasons for not including the property in the suit, a second suit for its partition would still be maintainable. The Court would also have no such power even U/s 153 of CPC to include a property suo motu. A suit ordinarily means a Civil proceeding instituted by presenting a plaint. Coming to the case on hand, Order VI, Rule 17 CPC provides that the Court may at any stage of the proceedings allow either party to alter or amend his pleadings as may be necessary for determining the real question in controversy between the parties. The plaint, therefore, can be*

*amended only at the instance of the plaintiff and the 1st defendant cannot seek to include a property in the plaint schedule. Sy. No. 51 measuring 3 acres 28 guntas is situated at Talale village, Huncha Hobli, Hosanagar Taluk was admittedly not included in the plaint. Nor did the 1st defendant make any attempt to bring the same to the notice of the Court during the pendency of the suit and therefore this property could not form a part of the preliminary decree. The impugned order therefore cannot be sustained.*

ಗೌರವಾನ್ವಿತರ ಈ ಮೇಲಿನ ತೀರ್ಪಿನಲ್ಲಿ, ತಿದ್ದುಪಡಿ ಅರ್ಜಿಯಲ್ಲಿ ವಿವರಿಸಿದಂತಹ ಆಸ್ತಿಗಳಿಗೆ ಸಂಬಂಧಿಸಿದಂತೆ, ವಿಭಜನೆಗಾಗಿ ಹಿಂದಿನ ದಾವೆಯಲ್ಲಿ ಅದನ್ನು ಹೊರಗಿಡಲು ಸಾಕಷ್ಟು ಕಾರಣವನ್ನು ತೋರಿಸಿದರೆ ಪ್ರತ್ಯೇಕ ದಾವೆಯನ್ನು ಹೂಡಬಹುದಾಗಿದೆ ಎಂದು ಉಲ್ಲೇಖಿಸಿರುತ್ತಾರೆ.

18. ಅಸಲು ದಾವಾ ಸಂಖ್ಯೆ 31/2015 ರಲ್ಲಿ ಈ ನ್ಯಾಯಾಲಯವು ದಾವಾ ಆಸ್ತಿಗಳ ಬಗ್ಗೆ ತೀರ್ಮಾನಿಸಿ ಆ ಆಸ್ತಿಗಳನ್ನು ವಾದಿ ಮತ್ತು ಪ್ರತಿವಾದಿ-1 ರಿಂದ 4 ರವರ ಜಂಟಿ ಕುಟುಂಬದ ಆಸ್ತಿಗಳೆಂದು ಪರಿಗಣಿಸಿ, ತೀರ್ಪನ್ನು ಘೋಷಿಸಿರುತ್ತದೆ. ಅರ್ಜಿದಾರರ ಪ್ರಕಾರ, ಅವರ ತಂದೆ ಸರ್ವೆ ನಂಬರ್ 35/3 ರಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂಬುದಾಗಿರುತ್ತದೆ. ಈ ಸಂಗತಿಯನ್ನು ಈ ಅರ್ಜಿಯಲ್ಲಿ ಪರಿಗಣಿಸಲು ಸಾಧ್ಯವಿಲ್ಲ ಹಾಗೂ ದಾವೆ ಹೂಡುವ

ಸಮಯದಲ್ಲಿ ಇದ್ದಂತಹ ಆಸ್ತಿಯ ಮೇಲೆ ನ್ಯಾಯಾಲಯವು ತೀರ್ಪನ್ನು ಘೋಷಿಸಿದ್ದು, ಪುನಃ ಬದಲಾದ ನಂಬರಿಗೆ ಹಿಂದಿನ ನಂಬರನ್ನು ತೆಗೆದು ಹಾಕಿ ಆ ಜಾಗದಲ್ಲಿ ತಿದ್ದುಪಡಿ ಮಾಡುವುದು ಸೂಕ್ತವಾಗಿರುವುದಿಲ್ಲ.

19. ಅರ್ಜಿದಾರರು / ವಾದಿಯರು ತಿದ್ದುಪಡಿ ಮಾಡಲು ಕೋರಿದ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಹೌದೋ ಅಥವಾ ಇಲ್ಲವೋ ಎನ್ನುವ ಬಗ್ಗೆ ಈ ಅರ್ಜಿಯಲ್ಲಿ ತೀರ್ಮಾನಿಸಲು ಸಾಧ್ಯವಿಲ್ಲ. ಆ ಆಸ್ತಿಗಳು ಅಸಲು ದಾವಾ ಸಂಖ್ಯೆ 31/2015 ರ ವಸ್ತು ವಿಷಯವಾಗಿರುವುದಿಲ್ಲ. ಆದ್ದರಿಂದ, ಈ ಅರ್ಜಿಯಲ್ಲಿ ಅರ್ಜಿದಾರರು / ವಾದಿಯರು ಕೋರಿರುವಂತೆ ತಿದ್ದುಪಡಿ ಮಾಡಲು ಅವಶ್ಯಕತೆ ಇದೆ ಎಂದು ಸಕಾರಣವನ್ನು ನೀಡಿರುವುದಿಲ್ಲ. ಆದ್ದರಿಂದ, ಅಂಶ-1 ಮತ್ತು 2 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

20. <u>ಅಂಶ-3ಃ</u>- ಮೇಲೆ ಹೇಳಿದ ಕಾರಣಗಳಿಂದ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## <u>ಆದೇಶ</u>

ಅರ್ಜಿದಾರರು ದಿನಾಂಕಃ 27.02.2020 ರಂದು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151 ರ ಅಡಿಯಲ್ಲಿ ಸಲ್ಲಿಸಿದಂತಹ ಅರ್ಜಿಯನ್ನು ವಜಾಗೊಳಿಸಲಾಗಿದೆ.

ಅರ್ಜಿದಾರರು ದಿನಾಂಕಃ 17.08.2020 ರಂದು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 6 ನಿಯಮ 17 ಸಹಕಲಂ 151ರ ಅಡಿಯಲ್ಲಿ ಸಲ್ಲಿಸಿದಂತಹ ಮಧ್ಯಂತರ ಅರ್ಜಿ-3 ನ್ನು ವಜಾಗೊಳಿಸಲಾಗಿದೆ.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ , ನಂತರ ಓದಿ, ತಿದ್ದುಪಡಿ ಮಾಡಿ ತೆರೆದ ನ್ಯಾಯಾಲಯದಲ್ಲಿ 3 ನೇ ಜನವರಿ-2024 ರಂದು ಘೋಷಿಸಲಾಯಿತು)

ಸಹಿ/-
(ಸುಜಾತ ಸುವರ್ಣ ಬಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕಡೂರು.